RA. 17/2021
ಪಿ.ಡಬ್ಲ್ಯೂ.1

ದಿನಾಂಕಃ 08.02.2024
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ನಾನು 10 ನೇ ತರಗತಿಯವರೆಗೆ ಉರ್ದು ಮಾಧ್ಯಮದಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 10 ನೇ ತರಗತಿಯನ್ನು 1992-93 ನೇ ಸಾಲಿನಲ್ಲಿ ಮುಗಿಸಿರುತ್ತೇನೆ. Cool Sky ಎನ್ನುವ ಹೆಸರಿನ ಐಸ್ ಕ್ರೀಂ ಫ್ಯಾಕ್ಟರಿ ಶಹಾಪೂರದಲ್ಲಿ ಇತ್ತು ಎಂದರೆ ನಿಜ. ರುಚಿ ಬೆಲ್ ಎನ್ನುವ ಹೆಸರಿನ ಇನ್ನೊಂದು ಐಸ್ ಕ್ರೀಂ ಫ್ಯಾಕ್ಟರಿಯು ಕಲಬುರಗಿಯಲ್ಲಿ ಇದ್ದಿತು ಅಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಶಹಾಪೂರದಲ್ಲಿರುವ ಐಸ್ ಕ್ರೀಂ ಫ್ಯಾಕ್ಟರರಿಯನ್ನು ಕಲಬುರಗಿಗೆ ಸ್ಥಳಾಂತರಿಸಿದೆವು ಅಂತಾ ಹೇಳುತ್ತಾರೆ. ಈಗಲೂ ಸಹ ಆ ಎರಡೂ ಫ್ಯಾಕ್ಟರಿಗಳು ನನ್ನ ಹೆಸರಿನಲ್ಲಿ ಇದ್ದು, ಅವು ಚಾಲನೆಯಲ್ಲಿ ಇರುತ್ತವೆ ಅಂದರೆ ಸರಿಯಲ್ಲ.

3. ನಾನು 2002 ರಲ್ಲಿ ದುಬೈಗೆ ಹೋಗಿದ್ದೆನು. ಅಲ್ಲಿ ನನಗೆ ವೇತನ ತಿಂಗಳಿಗೆ 30 ಸಾವಿರ ರೂಪಾಯಿ ಇದ್ದಿತ್ತು. (ಭಾರತೀಯ ಕರೆನ್ಸಿಯಲ್ಲಿ). ದುಬೈಯಿಂದ ವಾಪಸ್ ಬಂದು ನಾನು ಸೌದಿ ದೇಶಕ್ಕೆ ಹೋಗಿದ್ದೆನು ಅಂದರೆ ಸರಿ. ಅಲ್ಲಿ ನನಗೆ ವೇತನ ತಿಂಗಳಿಗೆ 1800 ರಿಯಲ್ ಇದ್ದಿತ್ತು. ಅದರ ಭಾರತೀಯ ಕರೆನ್ಸಿ ಮೌಲ್ಯ ಎಷ್ಟು ಇದ್ದಿತ್ತು ಎಂದು ನನಗೆ ನೆನಪಿಲ್ಲ. ಆಗ ನನಗೆ ತಿಂಗಳಿಗೆ 40 ಸಾವಿರ ರೂಪಾಯಿ ವೇತನ ಇದ್ದಿತ್ತು ಅಂದರೆ ನನಗೆ ನೆನಪಿಲ್ಲ. 40 ಸಾವಿರ ರೂಪಾಯಿ ವೇತನ ಇದ್ದರೂ ಸಹ ನೆನಪಿಲ್ಲ ಅಂತಾ ಹೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆಸರಿಯಲ್ಲ.

4. ನನ್ನ ಬಳಿ ಒಂದು ಟಾಟಾ ಏಸ್ ಮತ್ತು ಟಂ ಟಂ ವಾಹನಗಳು ಇರುತ್ತವೆ ಅಂದರೆ ನಿಜ. ಅವುಗಳನ್ನು ಬಾಡಿಗೆಗೆ ನೀಡಿ ಅದರಿಂದ ತಿಂಗಳಿಗೆ 30 ಸಾವಿರ ರೂಪಾಯಿ ಬಾಡಿಗೆ ಬರುತ್ತದೆ ಅಂದರೆ ಸಾಕ್ಷಿಯು ಆ ವಾಹನಗಳನ್ನು ಬಾಡಿಗೆಗೆ ಕೊಟ್ಟಿರುವುದಿಲ್ಲ ಹಾಗಾಗಿ ನನಗೆ ತಿಂಗಳಿಗೆ ವಾಹನಗಳಿಂದ ಬಾಡಿಗೆ ಹಣ ಬರುವುದಿಲ್ಲ ಅಂತಾ ಹೇಳುತ್ತಾರೆ. ಸದರಿ ವಾಹನಗಳಿಂದ ಬಾಡಿಗೆ ಹಣ ಬರುವುದಿಲ್ಲ ಅಂತಾ ಹೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

5. ನನ್ನ ಹೆಂಡತಿಯು ಸರಕಾರಿ ಶಾಲಾ ಶಿಕ್ಷಕಿ ಇದ್ದರು. ಸಾಕ್ಷಿ ಸ್ವತಃ ಮುಂದುವರೆದು, ಈಗ ಅವರ ಸಗರ ಗ್ರಾಮದಲ್ಲಿ ಮತ್ತು ನಾನು ಶಹಾಪೂರದಲ್ಲಿ ವಾಸವಾಗಿರುತ್ತೇವೆ ಅಂತಾ ಹೇಳುತ್ತಾರೆ. ನನ್ನ ಹೆಂಡತಿಯು ಶಹಾಪೂರದಲ್ಲಿ ನನ್ನ ಜೊತೆಗೆ ಇದ್ದರೂ ಸಹ ಅವರು ಸಗರದಲ್ಲಿ ವಾಸವಾಗಿರುತ್ತಾರೆ ಅಂತಾ ಹೇಳಿ ಸುಳುಳ ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಹೆಂಡತಿಗೆ ತಿಂಗಳಿಗೆ 80 ಸಾವಿರ ರೂಪಾಯಿ ವೇತನ ಇರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರೆದು ಅವರಿಗೆ ಈ ಹಿಂದೆ 40 ಸಾವಿರ ರೂಪಾಯಿ ವೇತನ ಇದ್ದಿತು, ಈಗ ಅವರಿಗೆ 50 ಸಾವಿರ ರೂಪಾಯಿ ವೇತನ ಇದ್ದಿರಬಹುದು ಎಂದು ಹೇಳುತ್ತಾರೆ.

6. ನನ್ನ ಹೆಸರಿನಲ್ಲಿ ಹಳಿಸಗರದಲ್ಲಿ 30 x 40 ಅಳತೆಯ ಒಂದು ನಿವೇಶನ ಇದ್ದಿತ್ತು ಅಂದರೆ ಸರಿಯಲ್ಲ. ಸದರಿ ನಿವೇಶನದ ಸಂ. 15-ಹೆಚ್./1/42 ಅಂತಾ ಇದೆ ಅಂದರೆ ಸಾಕ್ಷಿ ಸದರಿ ನಿವೇಶನವು ಹಳಿಸಗರದ್ಲಿ ಇರಲಿಲ್ಲ, ಅದು ಭೀ. ಗುಡಿ ಸಮೀಪದಲ್ಲಿ ಇದ್ದಿತು ಅಂತಾ ಹೇಳುತ್ತಾರೆ. ಸದರಿ ನಿವೇಶನವನ್ನು 2015 ರಲ್ಲಿ 02 ಲಕ್ಷ 25 ಸಾವಿರ ರೂಪಾಯಿಗಳಿಗೆ ಮಾರಾಟಮಾಡಿ ಬಂದ ಹಣವನ್ನು ಐಸ್ ಕ್ರೀಂ ಫ್ಯಾಕ್ಟರಿ ನಡೆಸುವುದನ್ನು ನಿವೇಶನ ಮಾಡಿರುತ್ತೇನೆ ಅಂತಾ ಹೇಳುತ್ತಾರೆ.

7. ಓ.ಎಸ್. ನಂ. 185/2019 ಡಿಕ್ರಿಯಾದ 10 ತಿಂಗಳ ನಂತರ ನನಗೆ ಗೊತ್ತಾಗಿರುತ್ತದೆ. ಸದರಿ ಡಿಕ್ರಿ ಬಗ್ಗೆ ಹೇಗೆ ಗೊತ್ತಾಯಿತು ಅಂತಾ ಕೇಳಲಾದ ಪ್ರಶ್ನೆಗೆ ಸಾಕ್ಷಿಯು, ನಾನು ಬ್ಯಾಂಕಿನಿಂದ ಸಾಲ ಪಡೆದುಕೊಳ್ಳಲು ಆಸ್ತಿಯ ಖಾತಾ ನಕಲು ತರಲು ಹೋಗಿದ್ದಾಗ, ಖಾತಾ ನಕಲು ಬದಲಾವಣೆ ಆಗಿರುವುದು ಕಂಡು ಬಂದಿತು ಮತ್ತು ಸದರಿ ದಾವೆ ಡಿಕ್ರಿಯಾಗಿರುವುದು ನನಗೆ ಗೊತ್ತಾಯಿತು ಅಂತಾ ಹೇಳುತ್ತಾರೆ. ನನಗೆ ಸದರಿ ದಾವೆ ಡಿಕ್ರಿ ಆಗಿದೆ ಎಂದು ಗೊತ್ತಾದ ತಕ್ಷಣ ಅದರ ನಕಲು ಪ್ರತಿ ಪಡೆಯಲು ಅರ್ಜಿ ಸಲ್ಲಿಸಿದ್ದೆನು. ಅರ್ಜಿ ಸಲ್ಲಿಸಿದ 8 ದಿನಗಳ ನಂತರ ನನಗೆ ತೀರ್ಪು ಮತ್ತು ಡಿಕ್ರಿಯ ನಕಲು ಪ್ರತಿಗಳು ನನಗೆ ಸಿಕ್ಕಿದ್ದವು. ನಿ.ಪಿ. 13 ರಲ್ಲಿ ನನ್ನ ಫೋಟೋದ ಕೆಳಗೆ ಉರ್ದು ಭಾಷೆಯಲ್ಲಿ ಇರುವ ಸಹಿಯು ನನ್ನ ಸಹಿ ಆಗಿರುತ್ತದೆ. ಸದರಿ ಸಹಿಯನ್ನು ನಿ.ಪಿ. 13-ಎ ಎಂದು ಗುರುತಿಸಲಾಯಿತು. ನಿ.ಪಿ. 14 ರಲ್ಲಿ ನನ್ನ ಫೋಟೋದ ಕೆಳಗೆ ಇಂಗ್ಲೀಷ್ ಭಾಷೆಯಲ್ಲಿ ಇರುವ ಸಹಿಯು ನನ್ನ ಸಹಿ ಆಗಿರುತ್ತದೆ. ಸದರಿ ಸಹಿಯನ್ನು ನಿ.ಪಿ. 14-ಎ ಎಂದು ಗುರುತಿಸಲಾಯಿತು.

8. ಈ ಹಂತದಲ್ಲಿ ಸಾಕ್ಷಿಗೆ ಮಧ್ಯಂತರ ಅರ್ಜಿ ಸಂ. 1 ರ ಪ್ರಮಾಣಪತ್ರದ ಮೇಲಿನ ಒಂದು ಸಹಿಯನ್ನು ತೋರಿಸಿದಾಗ, ಸಾಕ್ಷಿಯು ಸದರಿ ಸಹಿಯು ತನ್ನ ಸಹಿಆಗಿರುತ್ತದೆ ಅಂತಾ ಒಪ್ಪಿಕೊಂಡಿರುತ್ತಾರೆ. ಸದರಿ ಪ್ರಮಾಣಪತ್ರವನ್ನು ನಿ.ಆರ್. 1 ಎಂದು, ಸಹಿಯನ್ನು ನಿ.ಆರ್. 1-ಎ ಗುರುತಿಸಲಾಯಿತು. ಈ ಹಂತದಲ್ಲಿ ಸಾಕ್ಷಿಗೆ ದಿನಾಂಕ 29.03.2021 ರ ವಕಾಲತ್‌ನಾಮಾ ಮೇಲಿನ ಒಂದು ಸಹಿಯನ್ನು ತೋರಿಸಿದಾಗ, ಸಾಕ್ಷಿಯು ಸದರಿ ಸಹಿಯು ತನ್ನ ಸಹಿ ಆಗಿರುತ್ತದೆ ಅಂತಾ ಒಪ್ಪಿಕೊಂಡಿರುತ್ತಾರೆ. ಸದರಿ ವಕಾಲತ್‌ನಾಮಾವನ್ನು

ನಿ.ಆರ್. 2 ಎಂದು, ಸಹಿಯನ್ನು ನಿ.ಆರ್. 2-ಎ ಗುರುತಿಸಲಾಯಿತು. ಈ ಹಂತದಲ್ಲಿ ಸಾಕ್ಷಿಗೆ ಒಂದು ಅಂಚೆ ಸ್ವೀಕೃತಿ ಪತ್ರ ತೋರಿಸಿ, ಅದರ ಮೇಲೆ ಇರುವ ಒಂದು ಸಹಿಯನ್ನು ತೋರಿಸಿದಾಗ, ಸಾಕ್ಷಿಯು ಸದರಿ ಸಹಿಯು ತನ್ನ ಸಹಿ ಆಗಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಅಂಚೆ ಸ್ವೀಕೃತಿಯ ಮೇಲೆ ಇರುವ ಸಹಿಯು ನನ್ನ ಸಹಿ ಆಗಿದ್ದರೂ ಸಹ ಇಲ್ಲ ಅಂತಾ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿ.ಪಿ. 3 ರಲ್ಲಿ Registered Article Number ನಮೂದಿಸಿರುವುದಿಲ್ಲ ಎಂದು ಹೇಳಿ ಹಿಂಬರಹ ಕೊಟ್ಟಿರುತ್ತಾರೆ ಅಂದರೆ ಸರಿ, ಸಾಕ್ಷಿ ಮುಂದುವರೆದು ನಾನು Article number ಬರೆದು ಇನ್ನೊಂದು ಅರ್ಜಿ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಾನು ಇನ್ನೊಂದು ಅರ್ಜಿಯನ್ನುಕೊಟ್ಟ ನಂತರ ಅಂಚೆ ಕಚೇರಿಯವರು ಆ ಬಗಗೆ ವಿಚಾರಣೆ ಮಾಡಿ, ಹಿಂಬರಹ ನೀಡುವುದಾಗಿ ಹೇಳಿದರು. ಚೇತನ್ ಎನ್ನುವ ಪೋಸ್ಟ ಮ್ಯಾನ್ ತಾನು ಮಾನ್ಯ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವುದಾಗಿ ಹೇಳಿರುತ್ತಾನೆ. ಚೇತನ್ ಎನ್ನುವ ಪೋಸ್ಟ ಮ್ಯಾನ್ ತಾನು ಮಾನ್ಯ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವುದಾಗಿ ಹೇಳಿರುತ್ತಾನೆ ಎಂದು ನನ್ನ ಅಪೀಲ್‌ದಲ್ಲಿ ಬರೆದಿರುವುದಿಲ್ಲ, ಆದರೆ ಪೋಸ್ಟ ಮ್ಯಾನ್ ಬಗ್ಗೆ ಹೇಳಿರುತ್ತೇನೆ. ನಾನು ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಈ ಅಪೀಲ್ ಸಲ್ಲಿಸಲು ಅಂಚೆ ಕಚೇರಿಗೆ ಸುಳ್ಳು ಅರ್ಜಿಯನ್ನು ಸಲ್ಲಿಸಿ, ಒಂದು ಕಾರಣ ಹುಡುಕಿರುತ್ತೇನೆ ಅಂದರೆ ಸರಿಯಲ್ಲ. ದಾವೆಯ ಸಮನ್ಸನ್ನು ನಾನೇ ಸ್ವತಃ ಸ್ವೀಕರಿಸಿದ್ದರೂ ಸಹ ನಾನು ಸ್ವೀಕರಿಸಿರುವುದಿಲ್ಲ ಎಂದು ಹೇಳು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ತೋರಿಸಿರುವ ವಿಳಂಬದ ಕಾರಣಗಳು ಸುಳ್ಳು ಇರುತ್ತವೆ ಅಂದರೆ ಸರಿಯಲ್ಲ. ನನ್ನಲ್ಲಿ ಸಾಕಷ್ಟು ಹಣ ಇದ್ದರೂ ಸಹ ನ್ಯಾಯಾಲಯದ ಶುಲ್ಕ ಪಾವತಿಸಲು ಆಗುವುದಿಲ್ಲ ಎಂದು ಸುಳ್ಳುಚ ಸಂಗತಿಯನ್ನು ಅರ್ಜಿಯಲ್ಲಿ ನಮೂದಿಸಿರುತ್ತೇನೆ ಅಂದರೆ ಸರಿಯಲ್ಲ. ದಾವೆಯ ವಿಚಾರಣೆ ನಡೆಯುವ ಕಾಲಕ್ಕೆ ನಾನು ಪ್ರತಿದಿನ ಮಾನ್ಯ ನ್ಯಾಯಾಲಯದಲ್ಲಿ ಹಾಜರು ಇರುತ್ತಿದ್ದೆನು ಅಂದರೆ ಸರಿಯಲ್ಲ. ನಾನು ನನ್ನ ತಾಯಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.